# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ದಿನಾಂಕ:21.11.2020 ರಂದು ಬೆಳಗ್ಗೆ 11.00 ಗಂಟೆಗೆ ವಾರ್ಡ್ ನಂ.17 (ಜೆ ಪಿ ಪಾರ್ಕ್) ರಲ್ಲಿ ಶ್ರೀ. ಎ. ಬಿ. ದೊಡ್ಡಯ್ಯ, (ಮುಖ್ಯ ಅಭಿಯಂತರರು, ದಾಸರಹಳ್ಳಿ ವಲಯ) ನೋಡಲ್ ಅಧಿಕಾರಿರವರ ಅಧ್ಯಕ್ಷತೆಯಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ನಡವಳಿಗಳು

ಹಾಜರಿದ್ದವರು:-

| ಕ್ರಮ ಸಂಖ್ಯೆ | ಅಧ್ಯಕ್ಷರು / ಸದಸ್ಯರ ಹೆಸರು | ಪದನಾಮ / ಇಲಾಖೆ | ಹಾಜರಿದ್ದರು |
|---|---|---|---|
| 1 | ಶ್ರೀ ಎ. ಬಿ. ದೊಡ್ಡಯ್ಯ | ವಾರ್ಡ್ ನೋಡಲ್ ಅಧಿಕಾರಿಗಳು | ಹಾಜರಿದ್ದರು |
| 2 | ಶ್ರೀ ಅಜಗಣ್ಣಯ್ಯ ಸ್ವಾಮಿ | ಸಹಾಯಕ ಅಭಿಯಂತರರು | ಹಾಜರಿದ್ದರು |
| 3 | ಡಾ|| ಚೇತನ್ | ವೈದ್ಯಾಧಿಕಾರಿಗಳು | ಹಾಜರಿದ್ದರು |
| 4 | ಶ್ರೀ ಸೋಮಶೇಖರ್ ಎಸ್. | ಕಿ. ಆ. ಪ. | ಹಾಜರಿದ್ದರು |
| 5 | ಶ್ರೀ ರಂಗರಾಜು | ಬೆಸ್ಕಾಂ | ಹಾಜರಿದ್ದರು |
| 6 | ಶ್ರೀ ಆಶೀರ್ವಾದ | 17/ಬಿ. ಮೇಲ್ವಿಚಾರಕರು | ಹಾಜರಿದ್ದರು |
| 7 | ಶ್ರೀ ಎಂ. ಸಿ. ವಿಲ್ಸನ್ | ಮೇಲ್ವಿಚಾರಕರು | ಹಾಜರಿದ್ದರು |
| 8 | ಶ್ರೀ ವೆಂಕಟೇಶ್ | ಮೇಲ್ವಿಚಾರಕರು | ಹಾಜರಿದ್ದರು |
| 9 | ಬಸವರಾಜು | ವಾರ್ಡ್-17/ಸಿ ಮೇಲ್ವಿಚಾರಕರು | ಹಾಜರಿದ್ದರು |
| 10 | ಶ್ರೀ ಮುರಳಿ | ಮೇಲ್ವಿಚಾರಕರು | ಹಾಜರಿದ್ದರು |
| 11 | ನಾಗೇಗೌಡ | ಮೇಲ್ವಿಚಾರಕರು | ಹಾಜರಿದ್ದರು |
| 12 | ಅಲಿಸ್ಟರ್ | ಮೇಲ್ವಿಚಾರಕರು | ಹಾಜರಿದ್ದರು |
| 13 | ಅಭಿಷೇಕ್ | ಮಾರ್ಷಲ್ | ಹಾಜರಿದ್ದರು |

ಮಾನ್ಯ ಅಧ್ಯಕ್ಷರ ಸ್ವಾಗತದೊಂದಿಗೆ ಅಧಿಕಾರಿಗಳು / ಹಾಜರಿದ್ದವರ ಪರಸ್ಪರ ಪರಿಚಯದೊಂದಿಗೆ ಸಭೆಯನ್ನು ಪ್ರಾರಂಭಿಸಲಾಯಿತು.

**1) ಕೋವಿಡ್-19 ಸಾಂಕ್ರಾಮಿಕ ರೋಗದ ಬಗ್ಗೆ:-**

- ಮತ್ತಿಕೆರೆ ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿಗಳು ಕೋವಿಡ್ ಪರೀಕ್ಷೆಯ ವಿವರಗಳನ್ನು ಸಭೆಯಲ್ಲಿ ಮಂಡಿಸಿದರು.

ಮತ್ತಿಕೆರೆ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಸ್ವಯಂ ಪ್ರೇರಿತರಾಗಿ ರೋಗ ಲಕ್ಷಣಗಳಿರುವ ಸಾರ್ವಜನಿಕರಿಗೆ ಸುಮಾರು 280 ರಿಂದ 300 ಜನರಿಗೆ ಪ್ರತಿದಿನ ಕೋವಿಡ್ ಪರೀಕ್ಷೆ ನಡೆಸುತ್ತಿರುವುದಾಗಿ ಸಭೆಯಲ್ಲಿ ಪ್ರಸ್ತಾಪಿಸಿದರು.

ಪು.ತಿ.ನೋ....2

Scanned with CamScanner

ಕಡ್ಡಾಯವಾಗಿ ಮಾಸ್ಕ್ ಧರಿಸುವಂತೆ ಜನಜಾಗೃತಿ ಮೂಡಿಸಲು ಧ್ವನಿವರ್ಧಕವಿರುವ ಆಟೋಗಳಲ್ಲಿ ಸಾಯಂಕಾಲ 5 ರಿಂದ 7 ಗಂಟೆಯವರೆಗೆ ಜನ ನಿಬಿಡ ಪ್ರದೇಶಗಳಲ್ಲಿ ಪ್ರಚಾರ ಮಾಡಲು ವ್ಯವಸ್ಥೆ ಮಾಡುವಂತೆ ಹಿರಿಯ ಆರೋಗ್ಯ ಪರಿವೀಕ್ಷಕರಿಗೆ ತಿಳಿಸಲಾಯಿತು. ಜೊತೆಗೆ ಬೀದಿ ಬೀದಿಗಳಲ್ಲಿ ತಳ್ಳುವ ಗಾಡಿ ಮತ್ತು ಇತರೆ ವಾಣಿಜ್ಯ ಚಟುವಟಿಕೆದಾರರಿಗೆ ತ್ಯಾಜ್ಯವನ್ನು ಸೂಕ್ತವಾಗಿ ವಿಲೇವಾರಿ ಮಾಡುವಂತೆ ಜಾಗೃತಿ ಮೂಡಿಸಲು ಸಭೆಯಲ್ಲಿ ಚರ್ಚಿಸಲಾಯಿತು.

**2) ಬ್ಲ್ಯಾಕ್ ಸ್ಪಾಟ್ (ಘನತ್ಯಾಜ್ಯ) ಗಳ ನಿರ್ವಹಣೆ ಹಾಗೂ ಬಯೋ ಮೆಡಿಕಲ್ ವೇಸ್ಟ್ ನಿರ್ವಹಣೆ ಕುರಿತು:-**

ಅಧ್ಯಕ್ಷರು ಮಾತನಾಡಿ, ವಾರ್ಡ್-17ರಲ್ಲಿ ಸಂಗ್ರಹವಾಗುವ ಒಣತ್ಯಾಜ್ಯಗಳನ್ನು ವಿಂಗಡಿಸಲು, ಒಣತ್ಯಾಜ್ಯ ಸಂಗ್ರಹಣಾ ಕೇಂದ್ರದ ಅವಶ್ಯಕತೆಯಿದ್ದು, ಡಿಡಬ್ಲ್ಯೂಸಿಸಿ ಕಟ್ಟಡವನ್ನು ತ್ವರಿತವಾಗಿ ನಿರ್ಮಿಸಿಕೊಡಬೇಕೆಂದು ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಘನತ್ಯಾಜ್ಯರವರಿಗೆ ಸೂಚಿಸಿರುತ್ತಾರೆ.

ಜೆ ಪಿ ಪಾರ್ಕ್ ವಾರ್ಡ್‌ನಲ್ಲಿ ತ್ಯಾಜ್ಯ ನಿರ್ವಹಣೆಯ ಬಗ್ಗೆ ಕಿರಿಯ ಆರೋಗ್ಯ ಪರಿವೀಕ್ಷಕರು ಮಾತನಾಡಿ, ವಾರ್ಡ್‌ನಲ್ಲಿ ಪ್ರತಿದಿನ ಕಸ ವಿಲೇವಾರಿ ಕಾರ್ಯವು ಸಮರ್ಪಕವಾಗಿ ನಿರ್ವಹಿಸುತ್ತಿರುವುದಾಗಿ ತಿಳಿಸಿರುತ್ತಾರೆ. ಹಾಗೂ ಬಯೋ ಮೆಡಿಕಲ್ ವೇಸ್ಟ್ ನಿರ್ವಹಣೆಯ ಬಗ್ಗೆ ಮೆಡಿಕೇರ್ ರವರ ಸಹಯೋಗದೊಂದಿಗೆ ಸಮರ್ಪಕವಾಗಿ ಕಾರ್ಯವನ್ನು ನಿರ್ವಹಿಸಿರುವುದಾಗಿ ತಿಳಿಸಿರುತ್ತಾರೆ.

ಕಿರಿಯ ಆರೋಗ್ಯ ಪರಿವೀಕ್ಷಕರು ಮಾತನಾಡಿ, ಎಂದಿನಂತೆ 'ಸಹಾಯ' ಕೋಶದಲ್ಲಿ ದಾಖಲಾಗಿರುವ ಆರೋಗ್ಯ ಇಲಾಖೆಗೆ ಸಂಬಂಧಿಸಿದ ಸಾರ್ವಜನಿಕರ ದೂರುಗಳನ್ನು ವಿಲೇ ಮಾಡಲಾಗಿರುತ್ತದೆ ಎಂದು ಸಭೆಗೆ ತಿಳಿಸಿರುತ್ತಾರೆ.

**3) ಆಟೋ ಟಿಪ್ಪರ್‌ಗಳ ಬಗ್ಗೆ:-**

2011ರ ಜನಗಣತಿಯಂತೆ, 2016ರಲ್ಲಿ ವಾರ್ಡ್ ಸಂಖ್ಯೆ:17ರಲ್ಲಿ 19000 ಸಾವಿರ ಕುಟುಂಬಗಳಿದ್ದು, ಅದರ ಆಧಾರದ ಮೇಲೆ ಕಸ ಸಂಗ್ರಹಣೆ ಮಾಡಲು 21 ಮೈಕ್ರೋ ಲೆವಲ್ ಬ್ಲಾಕ್‌ಗಳನ್ನು ಮಾಡಿರುತ್ತಾರೆ. ಆದರೆ ಪ್ರಸ್ತುತ ವಾರ್ಡ್‌ನಲ್ಲಿ 23000 ಕುಟುಂಬಗಳು ವಾಸ ಮಾಡುತ್ತಿದ್ದು, ಅಂದರೆ 2016ಕ್ಕೆ ಹೋಲಿಸಿದಾಗ 4000 ಕುಟುಂಬಗಳು ಹೆಚ್ಚುವರಿಯಾಗಿರುತ್ತದೆ. ಆದ್ದರಿಂದ ಹೆಚ್ಚು ಕಸ ಸಂಗ್ರಹವಾಗುತ್ತಿದ್ದು, 19000 ಕುಟುಂಬಗಳಿದ್ದಾಗಲೂ 21 ಆಟೋಗಳಿದ್ದು, ಪ್ರಸ್ತುತ 23000 ಕುಟುಂಬಗಳಿದ್ದಾಗಲೂ ಅಷ್ಟೇ ಸಂಖ್ಯೆಯ ಆಟೋ ಟಿಪ್ಪರ್‌ಗಳಿವೆ. ಆದ್ದರಿಂದ ವಾರ್ಡ್‌ನಲ್ಲಿ ಕಸ ಸಂಗ್ರಹಣೆಗೆ ತುಂಬಾ ತೊಂದರೆಯಾಗುತ್ತಿದ್ದು, ಹಾಗೂ ವಿಳಂಬವಾಗುತ್ತಿರುತ್ತದೆ. ಹಾಗಾಗಿ ಕಸ ಸಂಗ್ರಹಣೆಗಾಗಿ ಮೈಕ್ರೋ ಲೆವಲ್ ಬ್ಲಾಕ್‌ಗಳನ್ನು ಹೆಚ್ಚು ಮಾಡಿ ಹಾಗೂ 5-6 ಆಟೋ ಟಿಪ್ಪರ್‌ಗಳನ್ನು ಹೆಚ್ಚುವರಿಯಾಗಿ ಒದಗಿಸಲು ಮಾನ್ಯ ಅಧ್ಯಕ್ಷರು ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಘನತ್ಯಾಜ್ಯರವರಿಗೆ ನಿರ್ದೇಶಿಸಿರುತ್ತಾರೆ.

Scanned with CamScanner

**4) ವಿದ್ಯುತ್ ತಂತಿಯ ದುರಸ್ಥಿಗೊಳಸುವ ಬಗ್ಗೆ:-**

ಮಾನ್ಯ ಅಧ್ಯಕ್ಷರು ಮಾತನಾಡಿ, ಎಸ್‌ಬಿಎಂ ಕಾಲೋನಿ, 4ನೇ ಅಡ್ಡರಸ್ತೆಯಲ್ಲಿರುವ ವಿದ್ಯುತ್ ಕಂಬದಲ್ಲಿ ಶಾರ್ಟ್ ಸರ್ಕ್ಯೂಟ್ ಕಂಡುಬರುತ್ತಿದ್ದು, ಸಾರ್ವಜನಿರಿಗೆ ಪ್ರಾಣಹಾನಿಯಾಗುವ ಸಂಭವವಿರುತ್ತದೆ. ಸ್ಥಳ ಪರಿವೀಕ್ಷಣೆ ಮಾಡಿ, ತ್ವರಿತವಾಗಿ ಸರಿಪಡಿಸಲು ಸಂಬಂಧಪಟ್ಟ ಕಿರಿಯ ಅಭಿಯಂತರರು (ಬೆಸ್ಕಾಂ) ರವರಿಗೆ ಕ್ರಮವಹಿಸಲು ಸೂಚಿಸಿರುತ್ತಾರೆ.

**5) ಬೋರ್‌ವೆಲ್‌ಗಳಗೆ ಮೀಟರ್ ಅಳವಡಿಸುವ ಬಗ್ಗೆ:-**

ವಾರ್ಡ್-17ರಲ್ಲಿ 09-10 ಬೋರ್‌ವೆಲ್‌ಗಳಿಗೆ ವಿದ್ಯುತ್ ಮೀಟರ್ ಅಳವಡಿಸಿರುವುದಿಲ್ಲ ಇದರಿಂದಾಗಿ, ಇಲಾಖೆಗೆ ಆರ್ಥಿಕ ನಷ್ಟವುಂಟಾಗುತ್ತಿರುತ್ತದೆ ಎಂದು ಕಿರಿಯ ಅಭಿಯಂತರರು, ಬೆಸ್ಕಾಂರವರು ಪ್ರಸ್ತಾಪಿಸಿದರು. ಇದರ ಬಗ್ಗೆ ವಾರ್ಡ್ ಸಹಾಯಕ ಅಭಿಯಂತರರು ಮಾಡನಾಡಿ, ಬಿಡಬ್ಲ್ಯೂಎಸ್‌ಎಸ್‌ಬಿಯವರು ಸ್ಥಳ ಪರಿವೀಕ್ಷಣೆ ನಡೆಸಿ, ಪಾಲಿಕೆಯ ಕಾಮಗಾರಿ ಇಲಾಖೆಗೆ ವರದಿ ನೀಡಲು ತಿಳಸಿರುತ್ತಾರೆ. ಆ ನಂತರ ಮೀಟರ್ ಅಳವಡಿಸಲು ಕ್ರಮ ಕೈಗೊಳ್ಳುವುದಾಗಿ ಸಭೆಯಲ್ಲಿ ಮಂಡಿಸಿದರು.

**6) ಬೀದಿ ದೀಪಗಳಗೆ ನಿರ್ವಹಣೆ ಕುರಿತು:-**

ಬೆಸ್ಕಾಂ ಕಿರಿಯ ಅಭಿಯಂತರರು ಮಾತನಾಡಿ, ಜೆ ಪಿ ಪಾರ್ಕ್ ವಾಡ್‌ನಲ್ಲಿ ಕೆಲವು ಬೀದಿ ದೀಪಗಳಿಗೆ ಡಿ.ಸಿ. ವಿದ್ಯುತ್‌ನ್ನು ಅಳವಡಿಸಲಾಗಿದ್ದು, ಇದರಿಂದಾಗಿ ಹೆಚ್ಚು ವಿದ್ಯತ್ ಪೋಲಾಗುತ್ತಿರುತ್ತದೆ ಎಂದು ತಿಳಸಿದರು. ಇದರ ಬಗ್ಗೆ ಅಧ್ಯಕ್ಷರು ಮಾತನಾಡಿ, ಸದರಿ ವಿದ್ಯುತ್ ಕಂಬಗಳ ಸ್ಥಳ ಪರಿವೀಕ್ಷಣೆ ನಡೆಸಿ, ಸೂಕ್ತ ಕ್ರಮ ಕೈಗೊಳ್ಳಲು ಕಾರ್ಯಪಾಲಕ ಅಭಿಯಂತರರು (ವಿದ್ಯುತ್), ರಾ ರಾ ನಗರ ರವರಿಗೆ ಸೂಚನೆ ನೀಡಿದರು.

**7) ಮಾಸ್ಕ್ ಹಾಕದಿರುವ ವ್ಯಕ್ತಿಗಳಗೆ ದಂಡ ವಿಧಿಸುವ ಬಗ್ಗೆ:-**

ಪ್ರಸ್ತಾಪಿತ ವಿಷಯದ ಬಗ್ಗೆ ಮಾರ್ಷಲ್‌ಗಳೊಂದಿಗೆ ಚರ್ಚಿಸಲಾಗಿದ್ದು, ಕೋವಿಡ್ ನಿಯಂತ್ರಣ ಸಂಬಂಧ ಮಾಸ್ಕ್ ಹಾಕದಿರುವ ಸಾರ್ವಜನಿಕರಿಗೆ ಸರ್ಕಾರದ ಆದೇಶದ ರೀತ್ಯಾ ದಂಡ ವಿಧಿಸಲು ಸೂಚಿಸಲಾಯಿತು.

**8) ಸ್ಯಾನಿಟರಿ ತ್ಯಾಜ್ಯ ಸಂಗ್ರಹಣಗೆ ಹಾಗೂ ಹೆಚ್ಚುವರಿ ಕಾಂಪ್ಯಾಕ್ಟರ್ ಒದಗಿಸುವ ಕುರಿತು:-**

ವಾರ್ಡ್-17ಕ್ಕೆ ಸಂಬಂಧಪಟ್ಟಂತೆ, ಸ್ಯಾನಿಟರಿ ತ್ಯಾಜ್ಯಗಳ ಸಂಗ್ರಹಣೆಗೆ ಯಾವುದೇ ಗುತ್ತಿಗೆದಾರರನ್ನು ನೇಮಿಸಿರುವುದಿಲ್ಲ. ಇವುಗಳು ಹಸಿ ತ್ಯಾಜ್ಯಗಳೊಂದಿಗೆ ಸಂಗ್ರಹ ಮಾಡಲಾಗುತ್ತಿದ್ದು, ಕಸ ವಿಂಗಡಣೆ ತೊಂದರೆಯಗುತ್ತಿದ್ದು, ಆದ್ದರಿಂದ, ಸ್ಯಾನಿಟರಿ ತ್ಯಾಜ್ಯಗಳ ಸಂಗ್ರಹಣೆಗೆ ಗುತ್ತಿಗೆದಾರರನ್ನು ನೇಮಿಸಿಕೊಡಬೇಕೆಂದು, ಕಿರಿಯ ಆರೋಗ್ಯ ಪರಿವೀಕ್ಷಕರು ಅಧ್ಯಕ್ಷರಿಗೆ ಮನವಿ ಮಾಡಿದರು.

Scanned with CamScanner

ಕಿರಿಯ ಆರೋಗ್ಯ ಪರಿವೀಕ್ಷಕರು ಮಾತನಾಡಿ. ವಾರ್ಡ್‌ಲ್ಲಿ ಪ್ರತಿದಿನ 09 ಟನ್ ಹಸಿ ಕಸ ಸಂಗ್ರಹವಾಗುತ್ತಿದ್ದು ಹಾಗೂ 12 ಟನ್ ಒಣ ಕಸ ಸಂಗ್ರಹವಾಗುತ್ತಿರುತ್ತದೆ. ಇವಗಳಿಗೆ ಹಾಲಿ ಕಾಂಪ್ಯಾಕ್ಟರ್ ಕಡಿಮೆಯಿದ್ದು, ಪ್ರತಿನಿತ್ಯ 04 ಟನ್ ಒಣಕಸ ಕಸದ ಪಾಯಿಂಟ್‌ನಲ್ಲೇ ಉಳಿಯುತ್ತಿರುತ್ತದೆ ಎಂದು ತಿಳಿಸಿದ್ದು. ಆದ್ದರಿಂದ 01 ಕಾಂಪ್ಯಾಕ್ಟರ್‌ನ್ನು ಹೆಚ್ಚುವರಿಯಾಗಿ ಒದಗಿಸಲು ಅಧ್ಯಕ್ಷರು, ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು (ಘನತ್ಯಾಜ್ಯ) ರವರಿಗೆ ಸೂಚಿಸಿದರು

**9) ಕಟ್ಟಡದ ಭಗ್ನಾವಶೇಷಗಳನ್ನು (Debris) ತೆರವುಗೊಳಿಸುವ ಬಗ್ಗೆ:-**

ವಾರ್ಡ್‌ನ ಕೆಲವೊಂದು ರಸ್ತೆಗಳಲ್ಲಿ ಕಟ್ಟಡದ ಭಗ್ನಾವಶೇಷಗಳು (**Debris**) ಅತಿಯಾಗಿ ಇರುವುದು ಕಂಡುಬಂದಿದ್ದು. ಈಗಾಗಲೇ ಅವುಗಳನ್ನು ತೆರವುಗೊಳಿಸಲಾಗುತ್ತಿದ್ದು. ಮುಂದಿನ ದಿನಗಳಲ್ಲಿ ಸಂಪೂರ್ಣವಾಗಿ ತೆರವುಗೊಳಿಸುವುದಾಗಿ ಸಂಬಂಧಪಟ್ಟ ಸಹಾಯಕ ಅಭಿಯಂತರರು ಸಭೆಯಲ್ಲಿ ತಿಳಿಸಿರುತ್ತಾರೆ.

ಕೊನೆಯದಾಗಿ ಅಧ್ಯಕ್ಷರು ಮಾತನಾಡಿ. ವಾರ್ಡ್ ವ್ಯಾಪ್ತಿಯಲ್ಲಿ ಸಾರ್ವಜನಿಕರ ಸಮಸ್ಯೆ / ದೂರುಗಳನ್ನು ದಾಖಲಿಸಲು ವಾರ್ಡ್‌ನಲ್ಲಿ ದೂರು ದಾಖಲಿಸುವ ಪುಸ್ತಕ ಲಭ್ಯವಿರುವಂತೆ ನೋಡಿಕೊಂಡು ಬರುವ ದೂರುಗಳನ್ನು ಆದ್ಯತೆಯ ಮೇರೆಗೆ ಕ್ರಮವಹಿಸುವಂತೆ ಹಾಗೂ ಪ್ರತಿ ವಾರ ಸಾಮೂಹಿಕ ಸ್ವಚ್ಛತಾ ಕಾರ್ಯಕ್ರಮವನ್ನು ಮುಂದುವರೆಸುಂತೆ ಸೂಚಿಸುತ್ತಾ. ಸಕಾಲದಲ್ಲಿ ಸಾರ್ವಜನಿಕ ಕುಂದುಕೊರತೆಗಳಿಗೆ ಸ್ಪಂದಿಸಿ ಪರಿಹರಿಸಲು ಕ್ರಮ ಕೈಗೊಂಡು ಇಲಾಖೆಗಳು ಸಮನ್ವಯತೆಯಿಂದ ಕೆಲಸ ನಿರ್ವಹಿಸಲು ಸೂಚಿಸಿದರು.

ಮೇಲ್ಕಂಡ ಸಮಸ್ಯೆಗಳ ಬಗ್ಗೆ ಸುಧೀರ್ಘವಾಗಿ ಚರ್ಚಿಸಿ. ಕಾರ್ಯದರ್ಶಿಯವರ ವಂದನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

| | |
|---|---|
| 23/11/2020 | 23/11/2020 |
| (ಅಜಗಣ್ಣಯ್ಯ ಸ್ವಾಮಿ) | ([illegible] ದೊಡ್ಡಯ್ಯ) |
| ಸಹಾಯಕ ಅಭಿಯಂತರರು ಹಾಗೂ | ಮುಖ್ಯ ಅಭಿಯಂತರರು ಹಾಗೂ |
| ಸದಸ್ಯ ಕಾರ್ಯದರ್ಶಿ | ವಾರ್ಡ್ ನೋಡಲ್ ಅಧಿಕಾರಿ |
| ವಾರ್ಡ್ ಸಂಖ್ಯೆ:17 | ವಾರ್ಡ್ ಸಂಖ್ಯೆ:17 |

Scanned with CamScanner